

## ಈ ಸಲದ ನಾಟಕಗಳು

ಅವ್ವೈ (ತಮಿಳು), ನಿರ್ದೇಶನ: ಎ. ಮಂಗೈ, ರಚನೆ: ಇಂಕ್ವಿಲಾಬ್, ತಂಡ: ಮರಪ್ಪಚ್ಚಿ ಚೆನ್ನೈ. 28–04–2018
ಶಿಖಂಡಿ (ಇಂಗ್ಲಿಷ್), ರಚನೆ/ನಿರ್ದೇಶನ: ಫಜಾ ಜಲಾಲಿ, ತಂಡ: ಫಾಟ್ಸ್ ದಿ ಆರ್ಟ್, ಮುಂಬಯಿ. 29–04–2018
ಕಕೇಶಿಯನ್ ಚಾಕ್ ಸರ್ಕಲ್ (ಕನ್ನಡ), ನಿರ್ದೇಶನ: ಚಂದ್ರ ಕೀರ್ತಿ ಬಿ, ರಚನೆ: ಬರ್ಟೋಲ್ಟ್ ಬ್ರೆಕ್ಟ್, ಅನುವಾದ: ಜಿ.ಎನ್. ರಂಗನಾಥ ರಾವ್, ತಂಡ: ಥಿಯೇಟರ್ ಆರ್ಟ್ರಿಸ್ಟ್ರಿ, ಬೆಂಗಳೂರು. 01–05–2018
ದಿ ಟ್ರಾನ್ಸ್‌ಪರೆಂಟ್ ಟ್ರಾಪ್, ನಿರ್ದೇಶನ: ಶ್ರೀಕಾಂತ್ ಭೀಡೆ, ತಂಡ: ಡ್ಯಾಸ್, ಪುಣೆ. 02–05–2018
ಕೋಡ್ ರೆಡ್ (ಬಂಗಾಳಿ) ರಚನೆ/ನಿರ್ದೇಶನ: ಡಾ. ಇಂದುದಿಪ ಸಿನ್ಹ, ತಂಡ: ಕೋಲ್ಕತ್ತ. 03–05–2018
ಮಹಾಭಾರತ (ಹಿಂದಿ, ಇಂಗ್ಲಿಷ್, ಕನ್ನಡ), ರಚನೆ ಮತ್ತು ನಿರ್ದೇಶನ: ಅನುರೂಪ ರಾಯ್, ತಂಡ: ಕತ್‌ಕಥಾ ಪೊಪೆಟ್ ಆರ್ಟ್ಸ್ ಟ್ರಸ್ಟ್, ನವದೆಹಲಿ. 04–05–2018.







### ಅವ್ವೈ

ಕವಯತ್ರಿಯ ಮೇಲೆ ಸಮಾಜ ಇಳಿವಯಸ್ಸು ಎನ್ನುವ ಪೊಳ್ಳು ಚಾದರ ಹೊದಿಸಿದೆ. ಇಳಿವಯಸ್ಸು ನಿಸರ್ಗ ಸಹಜ. ಅದಕ್ಕೆ ಅದರದೇ ಆದ ಸೌಂದರ್ಯವಿದೆ. ಆದರೆ ಪುರುಷ ಸಮಾಜಕ್ಕೆ ಇದೊಂದು ದೊಡ್ಡ ಕೊರತೆಯಾಗಿ ಕಾಡುತ್ತದೆ. ನಾಟಕ ಈ ಪೊರೆಯನ್ನು ಕಳಚಿ ಇಂಥ ಋಣಾತ್ಮಕ ನಿಲುವನ್ನು ಅತ್ಯಂತ ಸ್ಪಷ್ಟವಾಗಿ ಧಿಕ್ಕರಿಸುತ್ತದೆ.

### ಕಕೇಶಿಯನ್ ಚಾಕ್ ಸರ್ಕಲ್

ಮಗು ತನಗೆ ಸೇರಿದ್ದು ಎಂದು ಇಬ್ಬರು ತಾಯಂದಿರು ಆ ವಿಷಯದಲ್ಲಿ ಜಗಳಕ್ಕೆ ನಿಲ್ಲುತ್ತಾರೆ. ಒಂದು ಸರ್ಕಲ್ ಮಾಡಿ ಅದರಲ್ಲಿ ಮಗುವನ್ನಿಟ್ಟು ಇಬ್ಬರಿಗೂ ಮಗುವನ್ನೆಳೆದುಕೊಳ್ಳುವ ಆಯ್ಕೆ ಇಡುವ ನಾಟಕೀಯ ವಸ್ತುವಿನ ಮೂಲಕ ಮನುಷ್ಯ ಸಂಬಂಧಗಳ ಅರ್ಥವ್ಯಾಪ್ತಿಯನ್ನು ಜರ್ಮನಿಯ ನಾಟಕಕಾರ ಬ್ರೆಕ್ಟ್ ವಿಸ್ತರಿಸುತ್ತಾನೆ. ಆತನ ಪ್ರಕಾರ ಜೈವಿಕತೆ ಅಥವಾ ಜೈವಿಕ ಹಕ್ಕು ಮಾತ್ರಗಳಿಂದ ಸಂಬಂಧಗಳನ್ನು ನಿರ್ಧರಿಸುವುದಲ್ಲ, ಯಾರು ಪ್ರೀತಿ ಮತ್ತು ಮಮತೆಯಿಂದ ಮಗುವನ್ನು ಸಾಕುತ್ತಾರೋ, ಆರೈಕೆ ಮಾಡುತ್ತಾರೊ ಅವರಿಗೆ ಮಗುವನ್ನು ಸೇರಿಸುವ ಒಂದು ಸಹಜ ನ್ಯಾಯ ಪರಿಕಲ್ಪನೆ ಬ್ರೆಕ್ಟ್‌ನದು.

### ಕೋಡ್ ರೆಡ್

ಯುದ್ಧಭೂಮಿಯಲ್ಲಿ ಸಮಾಧಿಗಳನ್ನು ಅಗೆಯುವ ತಂಡದಲ್ಲಿದ್ದ ಮನಃಶಾಸ್ತ್ರಜ್ಞ, ಹೆಣಗಳನ್ನು ಕಂಡು ರೋಸಿ ಹೋಗುತ್ತಾನೆ. ಬೇರೆ ಆಸ್ಪತ್ರೆಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾನೆ. ಯುದ್ಧಭೂಮಿಯಲ್ಲೇ ಅತ್ಯಾಚಾರಕ್ಕೊಳಗಾಗಿ ರಕ್ಷಿಸಲ್ಪಟ್ಟ ಯುವತಿಯೊಬ್ಬಳನ್ನು ಭೇಟಿ ಮಾಡುತ್ತಾನೆ. ಗರ್ಭಿಣಿಯಾದ ಆಕೆಯೊಂದಿಗೆ ನಿರಂತರ ಮಾತನಾಡುತ್ತ, ಜೀವನೋತ್ಸಾಹ ಪಡೆಯುವಂತೆ ಪ್ರೇರೇಪಿಸುತ್ತಾನೆ. ಆ ಹೆಣ್ಣುಮಗಳು ಮಗುವನ್ನು ಉಳಿಸಿಕೊಳ್ಳುವ ನಿರ್ಧಾರಕ್ಕೆ ಬರುತ್ತಾಳೆ. ಮನಃಶಾಸ್ತ್ರಜ್ಞ ಯುದ್ಧಭೂಮಿಯನ್ನೇ ತ್ಯಜಿಸುತ್ತಾನೆ. ಈ ಮೂಲಕ ಇಬ್ಬರೂ ನಾಶ ಎನ್ನುವುದು ತಾತ್ಕಾಲಿಕ, ಹೊಸ ಹುಟ್ಟು, ಮನುಷ್ಯ ಸಂಬಂಧವೇ ಅಂತಿಮ ಸತ್ಯ ಎನ್ನುವುದನ್ನು ಕಂಡುಕೊಳ್ಳುತ್ತಾರೆ.

### ಶಿಖಂಡಿ

ಪುರಾಣದ ಮೊಟ್ಟ ಮೊದಲ ಟ್ರಾನ್ಸ್ ಕ್ಯಾರೆಕ್ಟರ್ (ಲಿಂಗ ಪರಿವರ್ತನದ ಪಾತ್ರ). ಹಿಂದಿನ ಜನ್ಮದ ಅಪಮಾನದ ಸೇಡು ತೀರಿಸಿಕೊಳ್ಳಲೆಂದು ಅಂಬೆ ಗಂಡಾಗಿ ಹುಟ್ಟಿದಳು ಎನ್ನುವುದು ಪುರಾಣ. ಅದಕ್ಕೂ ವಿಧಿಯ ಆಟವೆಂದರೆ, ಹೆಣ್ಣಾಗಿ ಹುಟ್ಟಿದ ಆಕೆಯನ್ನು ಗಂಡಿನಂತೆ ಬೆಳೆಸಲಾಗುತ್ತದೆ. ಮದುವೆಯ ರಾತ್ರಿ ಕಾಡಿನಲ್ಲಿ ಯಕ್ಷನೊಬ್ಬನ ಕಾರಣದಿಂದ ಆಕೆಯ ಲಿಂಗ ಪರಿವರ್ತನೆ ಆಗುತ್ತದೆ. ಭೀಷ್ಮ ಸಾವಿಗೆ ಕಾರಣವಾಗುವುದರ ಮೂಲಕ ಅವಳ ಹುಟ್ಟಿನ ಕಾರಣ ಪೂರ್ಣವಾಗುತ್ತದೆ. ಶಿಖಂಡಿಯ ಕಥೆಯನ್ನು ಹಾಸ್ಯದ ಮೂಲಕ ಪುರಾಣ, ಸಮಕಾಲೀನ ವಿಷಯಗಳನ್ನು ಬಳಸಿಕೊಂಡು ಹೇಳಲಾಗಿದೆ. ಗಂಡುತನ, ಹೆಣ್ತನ ಎರಡರ ನಡುವಿನ ಅನೇಕ ವಿಷಯಗಳನ್ನು ಕೆಣಕುತ್ತದೆ.

### ದಿ ಟ್ರಾನ್ಸ್‌ಪರೆಂಟ್ ಟ್ರಾಪ್

ಪ್ಲಾಸ್ಟಿಕ್ ಆವಿಷ್ಕಾರವಾದಾಗಿನಿಂದ ನಾವಿದನ್ನು ಬಳಸುತ್ತ ಬದುಕಿನ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದ್ದೇವೆ. ಕರಗದ ಮತ್ತು ನಾಶವಾಗದ ಈ ವಸ್ತು ಅವಿಘಟನೀಯ ಗುಣದಿಂದಾಗಿ ಭೂಚರ, ಜಲಚರ ಮತ್ತು ಉಭಯಚರಿ ಜೀವಿಗಳ ಪಾಲಿಗೆ ಮೃತ್ಯುವಾಗಿದೆ. ಈ ಕಾರಣದಿಂದಲೇ ಅನೇಕ ಜೀವಿಗಳ ನಾಶಕ್ಕೆ ಮತ್ತು ಗ್ಲೋಬಲ್ ವಾರ್ಮಿಂಗ್‌ಗೂ ಕಾರಣವಾಗಿದೆ. ಅನೈಸರ್ಗಿಕವಾದ ಆವಿಷ್ಕಾರದಿಂದ ಮಾನವ ಬದುಕಿಗೆ ಮಾರಕವಾಗಿರುವ ಇದರ ಬಲೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಏನಾದರೊಂದು ಹಾದಿ ಹುಡುಕಲೇಬೇಕಿದೆ ಎನ್ನುತ್ತದೆ ಈ ನಾಟಕ.

ವಿನ್ಯಾಸ: ದಿಲ್